
ಎನ್ನುವುದು ಅವಸರದ ನಿರ್ಣಯವಾಗುತ್ತದೆ. ಲಕ್ಷ ಲಕ್ಷ ಕನ್ನಡಿಗರಿಗೆ ಅನ್ನ ನೀಡಿದ ಮುಂಬಯಿಯನ್ನು ಸಾರಾಸಗಟಾಗಿ ಕ್ರೂರಿ ಎನ್ನುವಂತಿಲ್ಲ. ಈಗಂತೂ ಮುಂಬಯಿ ಲೆಕ್ಕವಿಲ್ಲದಷ್ಟು ಹಳ್ಳಿ ಜನಗಳನ್ನು, ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆಗಳನ್ನು ಅರಗಿಸಿಕೊಂಡ ನಗರವಾಗಿ ಬೆಳೆದು ಬಿಟ್ಟಿದೆ. ನೀವು ಸರಿಯಾಗಿ ಗಮನಿಸಿದಂತೆ, ಮಾನವ ಸ್ವಭಾವಗಳು ಭೂತಕನ್ನಡಿಯಲ್ಲಿ ಪ್ರತಿಫಲಿಸಿದಂತೆ ಈ ಮಹಾನಗರದಲ್ಲಿ ಕಂಡುಬರುತ್ತವೆ. ಇದಕ್ಕೆ ಸಂವಹನ ಸಾಧ್ಯತೆ ಹೆಚ್ಚಾಗಿರುವುದು ಒಂದು ಕಾರಣವೇನೋ.

- **ನಿಮ್ಮ ಪ್ರಕಾರ ಇಂದು ಬರುತ್ತಿರುವ ಕನ್ನಡ ಸಾಹಿತ್ಯ ಕೃಷಿ ಹೇಗಿದೆ? ಇಂದಿನ ಸಣ್ಣಕತೆಗಳಲ್ಲಿ ಹೊಸ ಪರಿಗಳ, ಹೊಸ ನಿರೂಪಣೆಗಳ ಹುಡುಕಾಟ ಇದೆ ಎಂದು ನಿಮಗೆ ಅನಿಸುತ್ತದೆಯೇ? ಇದಕ್ಕೆ ಕಾರಣವೇನಿರಬಹುದು?**

ಇಂದು ಬರುತ್ತಿರುವ ಕನ್ನಡ ಸಾಹಿತ್ಯ ಕೃಷಿಯ ಕುರಿತು ಇದಮಿತ್ಥಮ್ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುವ ಧಾರ್ಷ್ಟ್ಯ ನನಗಿಲ್ಲ. ಮುಂಬಯಿಯಲ್ಲಿದ್ದುಕೊಂಡು ಕನ್ನಡದ ಅಲ್ಪಸ್ವಲ್ಪ ಸಮಗ್ರವೆನಿಸುವ ಓದು ಕೂಡಾ ನನಗೆ ಸಾಧ್ಯವಾಗಿಲ್ಲ. ನಾನು ಓದಿಕೊಂಡವರಲ್ಲಿ ವಸುಧೇಂದ್ರ ನನ್ನ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ಸಹನಾ ವಿಜಯಕುಮಾರ್ ಅವರ 'ಕಶೀರ' ಕೂಡಾ ನನಗೆ ಇಷ್ಟವಾಯಿತು.

ನಾನು ಓದಿದ ಹೊಸಬರ ಸಣ್ಣ ಕತೆಗಳು ಅಂತಹ ಮುದ ನೀಡಿಲ್ಲ ನನಗೆ. ಈಗಿನ ಯುವ ಲೇಖಕರು ಸಿದ್ಧ ವಸ್ತುಗಳಿಗೇ ಜೋತು ಬೀಳುತ್ತಾರೆ ಎಂದು ನನ್ನ ಓದಿನ ಮಿತಿಯಲ್ಲಿ ಹೇಳಬಯಸುತ್ತೇನೆ. ಈ ಅಭಿಪ್ರಾಯ ಸಾರ್ವತ್ರಿಕ ಅಲ್ಲ ಎಂದು ನಾನು ನಂಬಿದ್ದೇನೆ. ಬರೆದುದನ್ನೆಲ್ಲ ಪ್ರಕಟಿಸುವ ಧಾವಂತ ಸಾಧುವಲ್ಲ ಎನ್ನುವುದು ನನ್ನ ಅಭಿಪ್ರಾಯ. ಅಷ್ಟಾಗಿ ಪ್ರಚಾರಕ್ಕೆ ಬಾರದ ವಿಜ್ಞಾನಿ ಲೇಖಕನಾದ



> ಮನಸ್ಸಿಗೆ ತಂಪೆನಿಸುವ ಕೆಲವು ಪ್ರಸಂಗಗಳು ಜಾಹೀರಾತು ಜಗತ್ತಿನಲ್ಲಿ ಇದ್ದದ್ದು ಸುಳ್ಳಲ್ಲ. ಇದನ್ನು ಬಿಟ್ಟರೆ ಎಲ್ಲ ಯಾಂತ್ರಿಕ ಬರವಣಿಗೆ ಎಂದೇ ಹೇಳಬೇಕು. ಆದರೆ ಜಾಹೀರಾತು ಬರವಣಿಗೆಯಿಂದ ನನ್ನ ಸೃಜನಶೀಲ ಕ್ರಿಯೆಗೆ ಯಾವುದೇ ಊನ ಉಂಟಾಗಿಲ್ಲ.